**ತನ್ನ ಕುಟೀರದೊಳಗೆ ಮಲಗಿ ಕಣ್ಣುಗಳನ್ನು ಮುಚ್ಚಿಕೊಂಡರು ಪೊಲ್ಲಂದ್ರ. ಕಣ್ಣೊಳಗೆ ಓಡುತ್ತಿದ್ದ ಬೆಳಕನ್ನು ಗಮನಿಸಿದರು. ಬೆಂಕಿಯನ್ನು ನೋಡುವಂತೆಯೇ ಇತ್ತು. ಹುಚ್ಚು ಆಲೋಚನೆಗಳು ಒಂದು ಪರಕೀಯ ಜೇನು ಹುಳದಂತೆ ಮೆದುಳಿನ ಜೇನುಗೂಡನ್ನು ಅದು ಕೆಡವಿಬಿಡುತ್ತದೆ.**

ತಿಂಡಿತಿನಿಸುಗಳನ್ನು ತಿನ್ನಲು, ಎಲ್ಲೆಯಿಲ್ಲದೆ ಅಲೆದಾಡಲೂ ಆಸೆಪಡುತ್ತದೆ. ಬಾಪುವಿನ ಹೋರಾಟ ಅವರೊಳಗಿರುವ ಆ ಮಗುವಿನೊಂದಿಗೆ.

"ಇನ್ನು ಸ್ವಲ್ಪ ಕುಡಿಯುತ್ತೀರಾ?" ಎಂದರು ಬಾ. ಬಾಪೂ ಅರಳಿದ ಮುಖದೊಂದಿಗೆ ಹೂಂ ಎಂದು ತಲೆಯಾಡಿಸಿದರು. ಅವರು ಎರಡು ಲೋಟ ಆಹಾರ ಸೇವಿಸಿದ್ದನ್ನು ಪೊಲ್ಲಂದ್ರರು ಮೊಟ್ಟಮೊದಲು ನೋಡಿದರು. ಅವರಿಗೆ ಆಗಲೇ ಯಾಕೋ ಚುರುಕ್ ಎಂದಿತು. ಒಂದು ಗಂಟೆಯ ಹೊತ್ತಿಗೆ ಬಾಪುವಿನ ಆರೋಗ್ಯ ಹದಗೆಟ್ಟಿತು. ತೀವ್ರವಾದ ಶೀತಭೇದಿ. ಬಾ ಅವರನ್ನು ಅಂದು ಆಶ್ರಮದಲ್ಲೇ ಉಳಿದುಕೊಳ್ಳಲು ಹೇಳಿದರು. ಆದರೆ ಕೆಲಸವನ್ನು ನಿಲ್ಲಿಸಲು ಆಗದು ಎಂದು ಮಾರನೆಯ ದಿನ ಬೆಳಗ್ಗೆ ಬಾಪೂ ಹೊರಟುಬಿಟ್ಟರು.

ನಡಿಯಾಡ್ ಹಿಂದೂ ಅನಾಥಾಶ್ರಮದಲ್ಲಿ ಅವರು ಹಾಸಿಗೆ ಹಿಡಿದರೆಂಬ ಸುದ್ದಿ ಬಂದಿತು. ಬಾ ತಕ್ಷಣ ಹೊರಟು ಅಲ್ಲಿಗೆ ಹೋದಾಗ ಪೊಲ್ಲಂದ್ರರೂ ಸಹ ಜತೆಯಲ್ಲಿಯೇ ಹೋದರು. ಬಾಪುವನ್ನು ನೋಡಿದ ಡಾಕ್ಟರ್ ಕಣುಕಾ ಅವರು ಅಲೋಪತಿ ಔಷಧಿಗಳನ್ನು ತೆಗೆದುಕೊಳ್ಳುವುದರ ಜತೆಗೆ ಆಹಾರ ಪದ್ಧತಿಯನ್ನು ಬದಲಾಯಿಸಲೇಬೇಕೆಂದು ಹೇಳಿದರು. ಬಾಪೂ ಯಾವ ಔಷಧಿಯನ್ನೂ ತೆಗೆದುಕೊಳ್ಳುವುದಿಲ್ಲ ಎಂದು ಹಟದಿಂದ ನಿರಾಕರಿಸಿದರು. ದೇಹದಲ್ಲಿ ಉಂಟಾಗುವ ತೊಂದರೆಯನ್ನು ದೇಹವೇ ಪರಿಹರಿಸಬೇಕು, ಔಷಧಿಗಳ ಮೂಲಕ ಸರಿಮಾಡಕೂಡದೆಂದು ವಾದಿಸಿದರು. ಡಾಕ್ಟರ್ ಕಣುಕಾ ಹಾಲನ್ನಾದರೂ ಕುಡಿಯುವಂತೆ ಒತ್ತಾಯಿಸಿದರು. ಪ್ರಾಣಿಗಳಿಂದ ಪಡೆಯುವ ಯಾವ ಆಹಾರವನ್ನೂ ಸ್ವೀಕರಿಸುವುದಿಲ್ಲ ಎಂದು ಬಾಪೂ ಖಚಿತವಾಗಿ ನಿರಾಕರಿಸಿದರು. ಹಾಲನ್ನು ಮರಿಗಳಿಗಾಗಿಯೇ ಆ ಪ್ರಾಣಿ ಸ್ರವಿಸುತ್ತದೆ, ಮನುಷ್ಯರಿಗಾಗಲ್ಲ. ಅದು ಕಳ್ಳತನ.

"ಇದೋ ನೋಡಿ ಡಾಕ್ಟರ್, ನನ್ನ ಸಿದ್ಧಾಂತಗಳನ್ನು ಸಂಪೂರ್ಣವಾಗಿ ಕೊನೆಯ ಹಂತದವರೆಗೂ ಪರಿಶೋಧನೆ ಮಾಡಿ ನೋಡಲು ಇದು ಒಂದು ಅವಕಾಶ. ನಾನು ಜೀವಂತವಾಗಿ ಉಳಿದು ಬಂದರೆ ನನ್ನ ಶೋಧನೆ ಗೆದ್ದಿತು ಎಂದಾಗುತ್ತದೆ. ಆಗ ನನಗೆಷ್ಟು ಸಂತೋಷವೂ ತೃಪ್ತಿಯೂ ದೊರಕುತ್ತದೆ... ಅದನ್ನು ನಾನು ಯಾಕೆ ಕಳೆದುಕೊಳ್ಳಬೇಕು?" ಎಂದರು ಬಾಪೂ.

"ಆದರೆ ನಿಮ್ಮ ದೇಹ ಅದನ್ನು ತಡೆದುಕೊಳ್ಳದು... ನೀವು ನಮಗೆ ಮುಖ್ಯ."

"ನಾನು ನಂಬುವ ವಿಷಯಗಳನ್ನು ನನ್ನ ಆತ್ಮದ ಜತೆಯಲ್ಲಿ ಮತ್ತು ನನ್ನ ದೇಹದ ಜತೆಯಲ್ಲಿ ಮಾತ್ರವೇ ನಾನು ಪರಿಶೋಧನೆ ಮಾಡಲು ಸಾಧ್ಯವಾಗುವುದು... ಯಾವುದಕ್ಕಾಗಿ ನನ್ನ ಪ್ರಾಣವನ್ನೇ ಕೊಡಲು ಸಿದ್ಧನಾಗಿದ್ದೇನೋ ಅದನ್ನು ಮಾತ್ರವೇ ನಾನು ಉಳಿದವರಿಗೆ ಸಲಹೆಯಾಗಿ ನೀಡಲು ಸಾಧ್ಯ."

ಕಣುಕಾ ಕೋಪಗೊಂಡರು. ಬಾಪೂ ಮುಗುಳ್ನಗುವಿನೊಂದಿಗೆ ಕಣ್ಣುಗಳನ್ನು ಮುಚ್ಚಿಕೊಂಡರು. ಕಣುಕಾ ಜುಗುಪ್ಸೆಯಿಂದ ನಿಟ್ಟುಸಿರು ಬಿಟ್ಟು ಎದ್ದು ಹೋದರು.